# ಕರ್ನಾಟಕ ಸರ್ಕಾರ

ಸಂ:ಜಿಆಕ:ಚಿಮ:158 :09-10

ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ
ಚಿಕ್ಕಮಗಳೂರು ಜಿಲ್ಲೆ
ದಿನಾಂಕ: 11-01-2010
ದೂರವಾಣಿ ಸಂ: 08262- 220722

## ಪ್ರಕಟಣೆ

ಚಿಕ್ಕಮಗಳೂರು ಜಿಲ್ಲೆಯ ಜಿಲ್ಲಾ ಆಯುಷ್ ಆಸ್ಪತ್ರೆಯಲ್ಲಿ ಪಂಚಕರ್ಮ ವಿಭಾಗಕ್ಕೆ ಎನ್.ಆರ್.ಹೆಚ್.ಎಂ. ಅಡಿಯಲ್ಲಿ (1)ಆಯುಷ್ ವೈದ್ಯರು, (2)ಶುಶ್ರೂಷಕಿಯರು, (3)ಚಿಕಿತ್ಸಾ ಸಹಾಯಕರು (ಥೆರಾಪಿಸ್ಟ್)ಗಳ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿಯು ಗರಿಷ್ಟ 10 ತಿಂಗಳು ಅಥವಾ ಹುದ್ದೆಯನ್ನು ನಿಯಮಾನುಸಾರ ಕ್ರಮಬದ್ಧವಾಗಿ ತುಂಬುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಸೀಮಿತವಾಗಿರುತ್ತವೆ ಎಂಬ ಷರತ್ತುಗಳಿಗೊಳಪಟ್ಟು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು ಸ್ವ ವಿವರ ಹೊಂದಿದ ತಮ್ಮ ವೈಯಕ್ತಿಕ ವಿವರ (ಬಯೋ-ಡಾಟ), ಭಾವಚಿತ್ರ ಹಾಗೂ ದೃಢೀಕೃತ ಪ್ರಮಾಣ ಪತ್ರಗಳೊಂದಿಗೆ ಸ್ವಂತ ಕೈಬರಹದ ಅರ್ಜಿಯನ್ನು ದಿನಾಂಕ:25-01-2010ರ ಸಾಯಂಕಾಲ 4-30 ರೊಳಗೆ ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯಿತಿ ಆವರಣ, ಚಿಕ್ಕಮಗಳೂರು ಇವರಿಗೆ ಸಲ್ಲಿಸಲು ಸೂಚಿಸಿದೆ. ಹೆಚ್ಚಿನ ಮಾಹಿತಿಯು www.chikmagalur.nic.in ನಲ್ಲಿ ಲಭ್ಯವಿರುತ್ತದೆ.

| ಕ್ರ. ಸಂ | ಹುದ್ದೆಯ ವಿವರ | ಖಾಲಿ ಹುದ್ದೆಯ ಸಂಖ್ಯೆ | ಮಾಸಿಕ ಸಂಚಿತ ವೇತನ | ವಿದ್ಯಾರ್ಹತೆ | ಮೀಸಲಾತಿ ವಿವರ |
|---|---|---|---|---|---|
| 1 | ಆಯುಷ್ ವೈದ್ಯರು (ಪಂಚಕರ್ಮ) | 2 | ಸ್ನಾತಕೋತ್ತರ ಅಭ್ಯರ್ಥಿಗೆ (ಆದ್ಯತೆ) 15,000/- ಪದವಿ ಅಭ್ಯರ್ಥಿಗೆ 11,300/- | ಎಂ.ಡಿ. (ಆಯುರ್ವೇದ) ಬಿ.ಎ.ಎಂ.ಎಸ್.ಪದವಿ | 1)ಪ.ಜಾ- 1 (ಗ್ರಾ) 2) ಸಾಮಾನ್ಯ (ಮಹಿಳೆ) |
| 2 | ಶುಶ್ರೂಷಕಿಯರು | 2 | 7000/- | 1)ಎಸ್.ಎಸ್.ಎಲ್.ಸಿ/ ಪಿ.ಯು.ಸಿ 2) 3 ವರ್ಷಗಳ ಜನರಲ್ ನರ್ಸಿಂಗ್ | 1) ಪ.ಜಾ (ಗ್ರಾ) 2) ಸಾಮಾನ್ಯ |

| | | | | | |
|---|---|---|---|---|---|
| | | | | ಅಥವಾ<br>3) ಡಿಪ್ಲೋಮ ನರ್ಸಿಂಗ್<br>ಅಥವಾ<br>4) BSc ನರ್ಸಿಂಗ್ | |
| 3 | ಚಿಕಿತ್ಸಾ ಸಹಾಯಕರು (ಥೆರಾಪಿಸ್ಟ್) (ಒಬ್ಬ ಪುರುಷ ಮತ್ತು ಒಬ್ಬ ಮಹಿಳೆ) | 2 | 8000/- | 1)BSc (ಯೋಗ ಮತ್ತು ಪ್ರ.ಚಿಕಿತ್ಸೆ ) ಪದವಿ<br>2)SSLC/ PUC ಮಸಜಿಸ್ಟ್ ತರಬೇತಿ<br>3) 3 ವರ್ಷಗಳ ಜನರಲ್ ನರ್ಸಿಂಗ್ ಕೋರ್ಸ್/ ಡಿಪ್ಲೋಮ ನರ್ಸಿಂಗ್,<br>BSc ನರ್ಸಿಂಗ್ | 1) ಪ.ಜಾ (ಗ್ರಾ)<br>2) ಸಾಮಾನ್ಯ. (ಮಹಿಳೆ) |

**ವಿಶೇಷ ಸೂಚನೆ:-**

1) ವಯೋಮಿತಿಯು ದಿನಾಂಕ:25-01-2010 ರಂದು ಪ.ಜಾತಿಯವರಿಗೆ 40 ವರ್ಷ ಹಾಗೂ ಸಾಮಾನ್ಯ ವರ್ಗದ ಅಭ್ಯರ್ಥಿಗಳಿಗೆ 35 ವರ್ಷ ಮೀರಿರಬಾರದು.
2) ನೇಮಕಾತಿಯಲ್ಲಿ ಸ್ಥಳೀಯರಿಗೆ ಹಾಗೂ ಕನ್ನಡ ಭಾಷಾ ಜ್ಞಾನ ಹೊಂದಿರುವ ಅಭ್ಯರ್ಥಿಗಳಿಗೆ ಆದ್ಯತೆ ನೀಡಲಾಗುವುದು.
3) ಮೀಸಲಾತಿ ಪಡೆಯುವ ಅಭ್ಯರ್ಥಿಗಳು ಸಕ್ಷಮ ಪ್ರಾಧಿಕಾರಗಳಿಂದ ತಮ್ಮ ಜಾತಿ ಪ್ರಮಾಣ ಪತ್ರ ಹಾಗೂ ಆದಾಯ ಪತ್ರ ಸಲ್ಲಿಸತಕ್ಕದ್ದು.

ತಮ್ಮ ವಿಶ್ವಾಸಿ,

ಜಿಲ್ಲಾ ಆಯುಷ್ ಅಧಿಕಾರಿಗಳು
ಚಿಕ್ಕಮಗಳೂರು ಜಿಲ್ಲೆ
ಚಿಕ್ಕಮಗಳೂರು